ತನ್ನ ಪಾಡಿಗೆ ತಾನಿರುತ್ತಿದ್ದ. ಆತನ ಹೆಂಡತಿಯಂತೂ ಮನೆಯಲ್ಲಿ ಇದ್ದಾಳೋ ಇಲ್ಲವೋ ಎನ್ನುವಂತಿರುತ್ತಿದ್ದಳು. ಮಕ್ಕಳಾರೂ ಇದ್ದಂತಿರಲಿಲ್ಲ. ಹೀಗಾಗಿ ಎರಡೂ ಮನೆಗಳ ನಡುವೆ ತಿಕ್ಕಾಟ ಗೊಣಗಾಟಗಳ ಆವಶ್ಯಕತೆಯೂ ದಿನಗಳೆದಂತೆ ಕಡಿಮೆಯಾಗಿಬಿಟ್ಟಿತು.

★★★

ಆದಿನ ರಾತ್ರಿ ಸುಮಾರು ಹತ್ತು ಗಂಟೆಯಾಗಿರಬಹುದು. ಗೆಳೆಯನೊಬ್ಬನೊಡನೆಯ ಸುದೀರ್ಘ ದೂರವಾಣಿ ಸಂಭಾಷಣೆಯ ಕೊನೆಯ ಹಂತದಲ್ಲಿದ್ದ ಗೋವಿಂದರಾಯ. ಆ ಗೆಳೆಯ 'ನೀನ್ಯಾಕೆ ಮುಂದಿನ ಬಾರಿಯ ಕಾರ್ಪೋರೇಟರ್ ಚುನಾವಣೆಗೆ ನಿಲ್ಲಬಾರದು?' ಎಂಬ ಪ್ರಶ್ನೆಯನ್ನು ಕೇಳಿದ್ದ, ಗೋವಿಂದರಾಯ ಗೆಲ್ಲಬಹುದಾದ ಎಲ್ಲ ಸಾಧ್ಯತೆಗಳನ್ನೂ ವಿವರವಾಗಿ ವಿಶ್ಲೇಷಿಸಿದ್ದ. ಅಲ್ಲದೇ ಚುನಾವಣೆಗೆ ಇನ್ನೂ ಒಂದು ವರ್ಷವಿದ್ದು, ತಯಾರಿಗೆ ಸಾಕಷ್ಟು ಸಮಯವಿರುವುದಾಗಿಯೂ ತಿಳಿಸಿದ್ದ. 'ಈಗಾಗಲೇ ಸಾಕಷ್ಟು ಹೆಸರಿದೆ. ಏರಿಯಾದಲ್ಲೆಲ್ಲ ಒಳ್ಳೇ ರೆಪುಟೇಷನ್ ಮೆಂಟೇನ್ ಮಾಡು. ಎಲ್ಲರನ್ನೂ ಚೆನ್ನಾಗಿ ಮಾತಾಡಿಸಿ ರಿಲೇಷನ್ ಬಿಲ್ಡ್ ಮಾಡ್ಕೊ. ಕೈಲಾದ ಚಿಕ್ಕ ಪುಟ್ಟ ಹೆಲ್ಪ್ ಮಾಡ್ತಾ ಇರು; ಎಲ್ಲಾ ಎಲೆಕ್ಷನ್ ಮುಗಿಯೋವರೆಗೆ ಮಾತ್ರ...' ಎನ್ನುವ ಟಿಪ್ಸ್‌ಗಳನ್ನೂ ಕೊಟ್ಟಿದ್ದ. ಈ ಒಂದು ಹೊಸ ಅವಕಾಶದ ಹೆಬ್ಬಾಗಿಲನ್ನು ತಲೆಯೊಳಗೆ ತೆರೆದುಕೊಂಡು ಗೋವಿಂದರಾಯ ಫೋನನ್ನು ಕೆಳಗಿಡುತ್ತಿರುವಂತೆಯೇ ಟೆರೇಸಿನಮೇಲೆ ಏನೋ ಗಲಾಟೆ ಕೇಳಿಸತೊಡಗಿತು. ನಡುವೆ 'ಅಯ್ಯೋss... ಅಮ್ಮಾ...' ಅನ್ನುವ ಕೂಗು ಆತನ ಮಗನದೇ ಎಂಬುದು ಸ್ಪಷ್ಟವಾಗುತ್ತಿರುವಂತೆ ಎದೆ 'ಧಸ್' ಎಂದು ಮೇಲಕ್ಕೆ ಓಡಿದ ಆತ.

ಪಕ್ಕದಮನೆಯ ಮಾಲೀಕ ತನ್ನ ಟೆರೇಸಿನಮೇಲೆ ಗೋವಿಂದರಾಯನ ಮಗನ ಕೊರಳಿನ ಕಾಲರನ್ನು ಬಿಗಿಯಾಗಿ ಹಿಡಿದುಕೊಂಡಿದ್ದ. ಮಗ ಬಿಡಿಸಿಕೊಳ್ಳಲು ಕೊಸರಾಡುತ್ತಿದ್ದ.

ದೃಶ್ಯ ನೋಡಿದ ಗೋವಿಂದರಾಯ ಹೌಹಾರಿ 'ಏ... ಬಿಡೋ... ಏನಾಯ್ತೋ...' ಎನ್ನುತ್ತ ಧಾವಿಸಿದ.

'ಏನಾಯ್ತು ಅಂತ ನಿಮ್ಮ ಮಗನನ್ನೇ ಕೇಳಿ' ಅಂದ ಪಕ್ಕದವ.

ಅಷ್ಟರೊಳಗೆ ಗೋವಿಂದರಾಯನ ಹೆಂಡತಿಯೂ ಬಂದು ಸೇರಿಕೊಂಡಳು. ಜಗಳ ತುಸು ಜೋರೇ ಆಯಿತು.

'ಮೊದ್ಲು ಬಿಡು ಅವನನ್ನ...' ಗೋವಿಂದರಾಯ ಗದರಿಸಿದ.

'ಬಿಡಲಿಕ್ಕೆ, ನಮ್ಮನೆ ಟೆರೇಸಿಗೆ ಬಂದದ್ದು ಯಾಕೆ ಅಂತಾ ಕೇಳಿ ಫಸ್ಟು' ಎಂದ ಪಕ್ಕದವ.

'ಅಲ್ಲಿಗ್ಯಾಕೆ ಹೋದ್ಯೋ...' ಎಂದು ಗೋವಿಂದರಾಯನ ಹೆಂಡತಿ ಎರಡೆರಡು ಬಾರಿ ಕೇಳಿದಮೇಲೆ 'ಮೊಬೈಲ್ ಸಿಮ್ಮು ಚೇಂಜ್ ಮಾಡ್ತ ಇದ್ದೆ, ಅದು ಹಾರಿ ಇವರ ಟೆರೇಸ್ ಮೇಲೆ ಮೇಲೆ ಬಿತ್ತು, ಹುಡುಕಲಿಕ್ಕೆ ಅಂತಾ ಬಂದೆ' ಅಂದ ಹುಡುಗ.

'ಏನು? ಮೊಬೈಲ್ ಸಿಮ್ಮಿಗೆ ರೆಕ್ಕೆ ಇದ್ಯಾ ಹಾರಿಕೊಂಡು ಬಂದು ನಮ್ಮನೆ ಟೆರೇಸಿನ ಮೇಲೆ ಬೀಳೋಕ್ಕೆ?...' ಅಂತಾ ಆತನೂ, 'ಹೌದೂರೀ, ಅವ ಊಟಾ ಆದ್ಮೇಲೆ ಮೇಲೆ ಬಂದು ಫ್ರೆಂಡ್ ಹತ್ರ ಫೋನಲ್ಲಿ ಸ್ಟಡೀ ಬಗ್ಗೆ ಡಿಸ್ಕಸ್ ಮಾಡ್ತಾನೆ ಡೇಲೀ...' ಅಂತಾ ಹುಡುಗನ ಅಮ್ಮನೂ, 'ಮೊದಲು ಅವನನ್ನು ಬಿಡ್ರೀ, ಆಮೇಲೆ ಯಾಕೆ ಹೋಗಿದ್ದಾ ಅಂತಾ ನೋಡೋಣ... ಏನು? ನಿಮ್ಮನೆ ಟೆರೇಸಿಗೆ ಯಾರೂ ಹೋಗ್ಲೇ ಬಾರ್ದಾ?' ಅಂತಾ